ಓ.ಎಸ್. ನಂ. **1/2021** **ಪಿ.ಡಬ್ಲೂಃ 1**

**ದಿನಾಂಕಃ 01.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು**

**ಪಾಟೀಸವಾಲು ಪ್ರತಿವಾದಿಗಳ ಪರ ಶ್ರೀ. ಹೆಚ್.ಎಸ್. ವಕೀಲರಿಂದ :-**

ನಾನು 7 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಮಲ್ಲಿಕಾರ್ಜುನಯ್ಯ ರವರಿಗೆ 4 ಜನ ಮಕ್ಕಳು. ಮಲ್ಲಿಕಾರ್ಜುನಯ್ಯ ನವರ ತಂದೆಯ ಹೆಸರು ಚನ್ನಬಸಪ್ಪ. ಚನ್ನಬಸಪ್ಪರವರಿಗೆ ಒಟ್ಟು ಮೂರು ಜನ ಮಕ್ಕಳು. ಅವರ ಹೆಸರುಗಳೆಂದರೆ ಮಲ್ಲಿಕಾರ್ಜುನಯ್ಯ, ಬಸಪ್ಪ ಮತ್ತು ಮಲ್ಲಮ್ಮ. ಬಸಪ್ಪನವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಮಲ್ಲಿಕಾರ್ಜುನಯ್ಯನವರಿಗೆ ನಾನು 3 ನೇ ಮಗಳು. ಮಲ್ಲಿಜಾರ್ಜುನಯ್ಯನವರಿಗೆ ಒಟ್ಟು 4 ಜನ ಮಕ್ಕಳಿದ್ದು, ನಾನು 3ನೇಯವಳು. ಉಳಿದ ಮಕ್ಕಳ ಹೆಸರೆಂದರೆ ನಂಜುಂಡಸ್ವಾಮಿ, ಗುರುಮಲ್ಲೇಶ ಮತ್ತು ಗುರುಬಸಪ್ಪ. ಮಲ್ಲಿಕಾರ್ಜುನಯ್ಯ ರವರು ಮೂಲತಹ ಬೇಲಿ ಕರ್ಪೂರವಳ್ಳಿ ಗ್ರಾಮದವರು. ಬೇಲಿ ಕರ್ಪೂರವಳ್ಳಿ ಗ್ರಾಮದಲ್ಲಿ ಮಲ್ಲಿಕಾರ್ಜುನಯ್ಯನವರಿಗೆ ಆಸ್ತಿ ಇದೆ ಎಷ್ಟು ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಮಲ್ಲಿಕಾರ್ಜುನಯ್ಯನವರು ಬಾಗೀವಾಳು ಗ್ರಾಮಕ್ಕೆ ಯಾರ ಮನೆಗೆ ಬಂದರು ಎಂದರೆ ಸಾಕ್ಷಿ ನನ್ನ ತಾಯಿಯ ಮನೆಗೆ ಬಂದಿರುತ್ತಾರೆ. ನನ್ನ ತಾಯಿಯ ತಾಯಿಯ ಹೆಸರು ಮಲ್ಲಮ್ಮ ಹಾಗೂ ತಾಯಿಯ ತಂದೆಯ ಹೆಸರು ನಂಜಪ್ಪಣ್ಣ ಎಂದು ಉತ್ತರಿಸುತ್ತಾರೆ. ನಂಜಪ್ಪಣ್ಣನವರಿಗೆ ಮೂರು ಜನ ಹೆಣ್ಣುಮಕ್ಕಳು ಇರುತ್ತಾರೆ. ಅವರುಗಳ ಹೆಸರು ಏನೆಂದರೆ ಗಂಗಮ್ಮ, ಗೌರಮ್ಮ ಹಾಗೂ ಇನ್ನೊಬ್ಬರ ಹೆಸರು ನೆನಪಿಲ್ಲ. ನಂಜಪ್ಪಣ್ಣನವರ ಮೊದಲನೇ ಮಗಳ ಹೆಸರು ನನಗೆ ಗೊತ್ತಿಲ್ಲ, 2ನೇ ಮಗಳ ಹೆಸರು ಗೌರಮ್ಮ. 3ನೇ ಮಗಳ ಹೆಸರು ಗಂಗಮ್ಮ.

ನಂಜಪ್ಪಣ್ಣನವರ ಮೊದಲನೇ ಮಗಳನ್ನು ಬೇಲಿ ಕರ್ಪೂರವಳ್ಳಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು. ಎಷ್ಟು ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರಿಗೆ 4 ಜನ ಹೆಣ್ಣುಮಕ್ಕಳು ಮತ್ತು 3 ಜನ ಗಂಡು ಮಕ್ಕಳು ಇದ್ದರು. ಹೆಣ್ಣುಮಕ್ಕಳನ್ನು ಯಾವ ಊರಿಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಗಂಡು

ಮಕ್ಕಳ ಹೆಸರು ಶೇಖರ, ರಮೇಶ, ಕುಮಾರ್ ಎಂದು ಇರುತ್ತಾರೆ. ಕೊನೆಯ ಮಗ ಕುಮಾರ್ ತೀರಿಕೊಂಡಿರುತ್ತಾರೆ. ಕುಮಾರ್ ರವರಿಗೆ ಮದುವೆಯಾಗಿರುವುದಿಲ್ಲ ಮತ್ತು ಎಷ್ಟು ವರ್ಷ ವಯಸ್ಸು ಎಂದು ನನಗೆ ಗೊತ್ತಿಲ್ಲ. ರಮೇಶ್‌ನಿಗೆ ಮದುವೆಯಾಗಿದೆ ಅವನಿಗೆ ಎಷ್ಟು ವರ್ಷ ವಯಸ್ಸು ಎಂದು ನನಗೆ ಗೊತ್ತಿಲ್ಲ. ಶೇಖರ್ ರವರಿಗೆ ಮದುವೆಯಾಗಿದೆ, ಮಕ್ಕಳು ಸಹಾ ಇವೆ ಅವರು ಬೇಲಿ ಕರ್ಪೂರವಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ.

ಗಂಗಮ್ಮನನ್ನು ಹರದೂರು ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ. ಅದು ಯಾವ ತಾಲ್ಲೂಕಿನಲ್ಲಿ ಇರುತ್ತದೆ ಎಂದು ಗೊತ್ತಿಲ್ಲ. ಮದುವೆಯಾಗಿ ಎಷ್ಟು ವರ್ಷವಾಗಿದೆ ಎಂದು ನನಗೆ ಗೊತ್ತಿಲ್ಲ. ಗಂಗಮ್ಮನಿಗೆ ಈಗ ಎಷ್ಟು ವರ್ಷ ವಯಸ್ಸು ಎಂದು ನನಗೆ ಗೊತ್ತಿಲ್ಲ. ಗೌರಮ್ಮನಿಗೆ ಎಷ್ಟು ವರ್ಷ ಎಂದು ನನಗೆ ಗೊತ್ತಿಲ್ಲ. ನನ್ನ ವಾದಪತ್ರದಲ್ಲಿಯ ವಂಶವೃಕ್ಷವನ್ನು ನಾನೇ ಹೇಳಿ ಬರೆಸಿರುತ್ತೇನೆ. ಗೌರಮ್ಮನಿಗೆ 60 ವರ್ಷ ಆಗಿದೆ ಎಂದು ನಾನು ವಾದಪತ್ರದಲ್ಲಿಯ ವಂಶವೃಕ್ಷದಲ್ಲಿ ಹೇಳಿರುತ್ತೇನೆ. ಮಲ್ಲಿಕಾರ್ಜುನಯ್ಯ ನವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನೆನಪಿಲ್ಲ. ಬೇಲಿ ಕರ್ಪೂರವಳ್ಳಿ ಗ್ರಾಮದಲ್ಲಿ ಪಿತ್ರಾರ್ಜಿತ ಆಸ್ತಿ ಇದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ.

ನನ್ನ ಮದುವೆ ದಿನಾಂಕ : 25.04.2000 ನೇ ಸಾಲಿನಲ್ಲಿ ಆಗಿರುತ್ತದೆ. ನನ್ನನ್ನು ಪಶುಪತಿ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಅದು ಯಾವ ತಾಲ್ಲೂಕಿನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಜಿಲ್ಲೆ ಮೈಸೂರು ಆಗಿರುತ್ತದೆ. ನನ್ನ ಗಂಡನ ಹೆಸರು ಕೆಂಡಗಣ್ಣಸ್ವಾಮಿ. ನನಗೆ ಇಬ್ಬರು ಮಕ್ಕಳು. ಮಗಳ ಹೆಸರು ಭವಾನಿ, ಮಗನ ಹೆಸರು ಯೋಗೇಶ್. ಪಶುಪತಿ ಗ್ರಾಮದಲ್ಲಿ ನನಗೆ ಜಮೀನು ಇರುವುದಿಲ್ಲ. ನಾನು ಮೈಸೂರಿನ ಗೌರಿಶಂಕರ ನಗರದಲ್ಲಿ ವಾಸವಿರುತ್ತೇನೆ. ಮೈಸೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇವೆ. ನನ್ನ ಮಗಳು 3 ನೇ ವರ್ಷದ ಇಂಜಿನಿಯರ್ ಓದುತ್ತಿದ್ದಾಳೆ, ಮಗ 3 ನೇ ವರ್ಷದ ಡಿಪ್ಲಮೋ ಓದುತ್ತಿದ್ದಾನೆ. ನಾನು ಯಾವುದೇ ಉದ್ಯೋಗ ಮಾಡುತ್ತಿಲ್ಲ, ಮನೆ ಕೆಲಸ ಮಾಡುತ್ತಿದ್ದೇನೆ.

ದಾವಾ ಆಸ್ತಿಗಳು ನಂಜಪ್ಪನವರಿಗೆ ಸ್ವಯಾರ್ಜಿತ ಆಸ್ತಿಗಳಾಗಿದ್ದು ಅವುಗಳನ್ನು

ನಂಜಪ್ಪನವರು ವಿಲ್ ಮೂಲಕ ಮೊಮ್ಮಗನಾದ ಗುರುಮಲ್ಲೇಶ್ ರವರಿಗೆ ಬರೆದುಕೊಟ್ಟಿರುತ್ತಾರೆ.



ಯಾವ ವರ್ಷದಲ್ಲಿ ವಿಲ್ ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಿಲ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಿಲ್ ನೋಂದಣಿಯಾಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ನಂಜಪ್ಪನವರಿಗೆ ಹೇಗೆ ಬಂದವು, ಹಾಗೂ ಗುರಮಲ್ಲೇಶ್ ರವರಿಗೆ ಯಾವ ರೀತಿ ಬಂದಿರುತ್ತದೆ ಎಂದು ಹೇಳಿರುತ್ತೇನೆ. ಯಾವ ಯಾವ ಸರ್ವೆ ನಂಬರ್‌ಗಳ ಮೇಲೆ ಈ ದಾವೆ ಸಲ್ಲಿಸಿದ್ದೇನೆ ಎಂದು ಈಗ ನನಗೆ ಹೇಳಲು ಬರುವುದಿಲ್ಲ, ಆದರೆ ಅದನ್ನು ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಎಷ್ಟು ವಿಸ್ತೀರ್ಣಕ್ಕೆ ದಾವೆ ಹಾಕಿದ್ದೇನೆ ಎಂದು ಹೇಳಿ ಬರೆಸಿರುತ್ತೇನೆ ಆದರೆ ಈಗ ಹೇಳಲು ಬರುವುದಿಲ್ಲ. ನನಗೆ 47 ವರ್ಷ ವಯಸ್ಸು. ನಂಜುಂಡಸ್ವಾಮಿ ರವರಿಗೆ 50 ವರ್ಷ ಆಗಿದೆ ಎಂದು ನಾನು ದಾವೆಯಲ್ಲಿ ಬರೆಸಿದ್ದೇನೆ. ಗುರುಮಲ್ಲೇಶ್ ತೀರಿಕೊಂಡಿರುತ್ತಾರೆ. ಗುರುಮಲ್ಲೇಶ್ ರವರು 8 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ತೀರಿಕೊಂಡಾಗ ಗುರುಮಲ್ಲೇಶ್ ರವರಿಗೆ ಎಷ್ಟು ವರ್ಷ ವಯಸ್ಸು ಎಂದು ನನಗೆ ಗೊತ್ತಿಲ್ಲ. ಗುರುಬಸಪ್ಪರವರಿಗೆ 48 ವರ್ಷ ಆಗಿರಬಹುದು. ನನಗೆ ಯಾವುದೇ ಮಾಹಿತಿ ಇರದೇ ಇದ್ದರು ಸಹಾ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ವಂಶ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಾ.

**ವಕೀಲರ ಕೋರಿಕೆ ಮೇರೆಗೆ ಪಾಟೀಸವಾಲು ಮುಂದೂಡಲಾಯಿತು.**

**ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ. ಹೇ. ಕೇ. ಸ. ಇ. ಒ,**

**(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)**
**ಹಿ.ವ್ಯ.ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.**